ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**- ರಾಮಥಾಳ (ಮರೋಳ) ಏತ ನೀರಾವರಿ ಯೋಜನೆಯ. 2ನೇ ಹಂತದಡಿ ಬರುವ ಹನಿ ನೀರಾವರಿಯನ್ನು ಯಶಸ್ವಿಯಾಗಿ ಮುನ್ನಡೆಸಲು ವಿಶೇಷ ರೈತ ಜಾಗೃತಿ ಮೀಸಲು ಘಟಕವನ್ನು (Dedicated Unit) ಸೃಜಿಸುವ ಬಗ್ಗೆ.

****

**ಓದಲಾಗಿದೆ** :- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:18/09/2019ರಂದು ಜರುಗಿದ ಸಭೆಯ ನಡವಳಿ.

ಪ್ರಸ್ತಾವನೆ:-

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರು ದಿನಾಂಕ:29/06/2019ರ ಕಛೇರಿ ಟಿಪ್ಪಣಿಯಲ್ಲಿ ದಿನಾಂಕ:07/03/2019ರಂದು ನಡೆದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ 120ನೇ ನಿರ್ದೇಶಕರ ಮಂಡಳಿಯ ಶಿಫಾರಸ್ಸಿನಂತೆ ರಾಮಥಾಳ (ಮರೋಳ) ಹನಿ ನೀರಾವರಿ ಯೋಜನೆಯನ್ನು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಮುನ್ನಡೆಸಲು ರೈತ ಸಮುದಾಯದ ಮತ್ತು ವಿವಿಧ ಇಲಾಖೆಗಳ, ಸಂಘ-ಸಂಸ್ಥೆಗಳ ಮಧ್ಯೆ ಕೊಂಡಿಯಾಗಿ ಕಾರ್ಯನಿರ್ವಹಿಸಲು ಕೃಷಿ, ತೋಟಗಾರಿಕೆ ಮತ್ತು ಇನ್ನಿತರೇ ಇಲಾಖೆಗಳಿಂದ ನಿಯೋಜನೆ ಪಡೆದ ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡ ವಾರ್ಷಿಕ ರೂ.70.00ಲಕ್ಷ ವೆಚ್ಚದಲ್ಲಿ ರಾಮಥಾಳ (ಮರೋಳ) ಹನಿ ನೀರಾವರಿ ಯೋಜನೆಯ "ವಿಶೇಷ ರೈತ ಜಾಗೃತಿ ಮೀಸಲು ಘಟಕವನ್ನು (Dedicated Unit) ರೂಪಿಸಲು ನಿಗಮದ ನಿರ್ದೇಶಕರ ಮಂಡಳಿಯು ಅನುಮೋದನೆ ನೀಡಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಮುಂದುವರೆದು, ಕಾರ್ಯನಿವಾಹಕ ಅಭಿಯಂತರರು, ಕೃಭಾಜನಿನಿ, ಎ.ಆರ್.ಬಿ.ಸಿ, ವಿಭಾಗ, ಹುನಗುಂದ ಇವರ ಅಡಿಯಲ್ಲಿ ರಾಮಥಾಳ (ಮರೋಳ) ಹನಿ ನೀರಾವರಿ ಯೋಜನೆಯ ವಿಶೇಷ ರೈತ ಜಾಗೃತ ಮೀಸಲು ಘಟಕ (Dedicated Unit) ವನ್ನು ಈ ಕೆಳಗಿನಂತೆ ಸೃಜಿಸಬಹುದಾಗಿದೆ ಎಂದು ವರದಿ ಮಾಡಿರುತ್ತಾರೆ.

| ಇಲಾಖೆಯ ಹೆಸರು | ಹುದ್ದೆಗಳ ವಿವರ | ಪಶ್ಚಿಮ ಭಾಗ (11,700 ಹೆ) | ಪೂರ್ವ ಭಾಗ (12,300 ಹೆ) |
|---|---|---|---|
| ಕೃಷಿ ಇಲಾಖೆ | ಸಹಾಯಕ ಕೃಷಿ ನಿರ್ದೇಶಕರು (Assistant Director of Agriculture- ADA) | 01 | |
| | ಕೃಷಿ ಅಧಿಕಾರಿ (Agriculture Officer–AO) | 01 | 01 |
| | ಸಹಾಯಕ ಕೃಷಿ ಅಧಿಕಾರಿ (Assistant Agriculture Officer-AAO) | 03 | 03 |
| ತೋಟಗಾರಿಗೆ ಇಲಾಖೆ | ಸಹಾಯಕ ತೋಟಗಾರಿಕೆ ಅಧಿಕಾರಿ (Assistant Horticulture Officer – AHO) | 01 | 01 |
| ಸಹಕಾರ ಇಲಾಖೆ (ಕೃಷ್ಣಾ ಕಾಡಾ) | ಸಹಾಯಕ ನಿಬಂಧಕರು (Assistant Registar) | 01 | 01 |

ದಿನಾಂಕ:18/09/2019ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ರಾಮಥಾಳ (ಮರೋಳ) ಹನಿ ನೀರಾವರಿ ಯೋಜನೆಯನ್ನು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಮುನ್ನಡೆಸಲು ಇತರ ಇಲಾಖೆಗಳಿಂದ ನಿಯೋಜನೆ ಪಡೆದ ಅಧಿಕಾರಿ/

ಸಿಬ್ಬಂದಿಗಳನ್ನೊಳಗೊಂಡ 'ವಿಶೇಷ ರೈತ ಜಾಗೃತಿ ಮೀಸಲು ಘಟಕ' (Dedicated unit) ವನ್ನು ಸೃಜಿಸಬಹುದಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

ಅದರಂತೆ, ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 160 ಕೆಬಿಎನ್ 2018, ಬೆಂಗಳೂರು, ದಿನಾಂಕ:13/11/2019.**

ರಾಮಥಾಳ (ಮರೋಳ) ಹನಿ ನೀರಾವರಿ ಯೋಜನೆಯನ್ನು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಮುನ್ನಡೆಸಲು ರೈತ ಸಮುದಾಯದ ಮತ್ತು ವಿವಿಧ ಇಲಾಖೆಗಳ, ಸಂಘ-ಸಂಸ್ಥೆಗಳ ಮಧ್ಯೆ ಕೊಂಡಿಯಾಗಿ ಕಾರ್ಯನಿರ್ವಹಿಸಲು ಕೃಷಿ, ತೋಟಗಾರಿಕೆ ಮತ್ತು ಇನ್ನಿತರೇ ಇಲಾಖೆಗಳಿಂದ ನಿಯೋಜನೆ ಪಡೆದ ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡ ವಾರ್ಷಿಕ ರೂ.70.00ಲಕ್ಷ ವೆಚ್ಚದಲ್ಲಿ "ವಿಶೇಷ ರೈತ ಜಾಗೃತಿ ಮೀಸಲು ಘಟಕವನ್ನು (Dedicated Unit) ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಆರ್.ಬಿ.ಸಿ, ವಿಭಾಗ, ಹುನಗುಂದ ಇವರ ಅಡಿಯಲ್ಲಿ ಈ ಕೆಳಗಿನಂತೆ ಸೃಜಿಸಿ ಆದೇಶ ಹೊರಡಿಸಲಾಗಿದೆ.

<table>
<tr><th>ಇಲಾಖೆಯ ಹೆಸರು</th><th>ಹುದ್ದೆಗಳ ವಿವರ</th><th>ಪಶ್ಚಿಮ ಭಾಗ (11,700 ಹೆ)</th><th>ಪೂರ್ವ ಭಾಗ (12,300 ಹೆ)</th></tr>
<tr><td rowspan="3">ಕೃಷಿ ಇಲಾಖೆ</td><td>ಸಹಾಯಕ ಕೃಷಿ ನಿರ್ದೇಶಕರು (Assistant Director of Agriculture-ADA)</td><td colspan="2">01</td></tr>
<tr><td>ಕೃಷಿ ಅಧಿಕಾರಿ (Agriculture Officer–AO)</td><td>01</td><td>01</td></tr>
<tr><td>ಸಹಾಯಕ ಕೃಷಿ ಅಧಿಕಾರಿ (Assistant Agriculture Officer-AAO)</td><td>03</td><td>03</td></tr>
<tr><td>ತೋಟಗಾರಿಗೆ ಇಲಾಖೆ</td><td>ಸಹಾಯಕ ತೋಟಗಾರಿಕೆ ಅಧಿಕಾರಿ (Assistant Horticulture Officer – AHO)</td><td>01</td><td>01</td></tr>
<tr><td>ಸಹಕಾರ ಇಲಾಖೆ (ಕೃಷ್ಣಾ ಕಾಡಾ)</td><td>ಸಹಾಯಕ ನಿಬಂಧಕರು (Assistant Registar)</td><td>01</td><td>01</td></tr>
</table>

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

13/11/19

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಅಣೆಕಟ್ಟು ವಲಯ, ಆಲಮಟ್ಟಿ..
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,
7. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
8. ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಸಹಾಯಕರು.
9. ಶಾಖಾ ರಕ್ಷಕ ಕಡತ/ ಹೆಚ್ಚಿನ ಪ್ರತಿಗಳು.